## ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಹಾಗೂ ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ನಿಯಮಗಳು, 1965

### ನಿಯಮಗಳ ಅನುಕ್ರಮಣಿಕೆ

ನಿಯಮ.

1. ಹೆಸರು.
2. ಪರಿಭಾಷೆಗಳು.

### ಅಧ್ಯಾಯ — II

### ಸಂರಕ್ಷಿತ ಸ್ಮಾರಕಗಳಿಗೆ ಪ್ರವೇಶಾವಕಾಶ.

3. ಒಪ್ಪಂದದ ಮೂಲಕ ನಿಯಂತ್ರಿತವಾದ ಸ್ಮಾರಕಗಳು.
4. ಮುಕ್ತವಾಗಿಲ್ಲದ ಸ್ಮಾರಕದ ಭಾಗಗಳು.
5. ಸ್ಮಾರಕಗಳಲ್ಲಿ ಸಭೆ, ಇತ್ಯಾದಿಗಳನ್ನು ನಡೆಸುವುದು.
6. ಸ್ಮಾರಕದೊಳಗೆ ಕೆಲವು ಕಾರ್ಯಗಳ ನಿಷೇಧ.
7. ದಂಡನೆ.

### ಅಧ್ಯಾಯ — III

### ಕೆಲವು ಪ್ರದೇಶಗಳಿಂದ ಪುರಾತನ ವಸ್ತುಗಳ ಸ್ಥಳ ಬದಲಾವಣೆ

8. ಪುರಾತನ ವಸ್ತುಗಳ ಸ್ಥಳ ಬದಲಾವಣೆಗಾಗಿ ಅರ್ಜಿ.
9. ಅನುಮತಿಯ ಮಂಜೂರಾತಿ ಅಥವಾ ನಿರಾಕರಣೆ.
10. ಅಪೀಲು.

### ಅಧ್ಯಾಯ — IV

### ಸಂರಕ್ಷಿತ ಸ್ಮಾರಕಗಳ ಹತ್ತಿರ ಗಣಿ ಕಾರ್ಯಾಚರಣೆ ಮತ್ತು ನಿರ್ಮಾಣ.

11. ಒಂದು ನಿಷೇಧಿತ ಅಥವಾ ನಿಯಂತ್ರಿತ ಪ್ರದೇಶವನ್ನು ಘೋಷಿಸಲು ಉದ್ದೇಶಿಸುವ ಅಧಿಸೂಚನೆ.
12. ನಿಷೇಧಿತ ಅಥವಾ ನಿಯಂತ್ರಿತ ಪ್ರದೇಶದ ಬಗ್ಗೆ ಘೋಷಣೆ.
13. ನಿಷೇಧಿತ ಅಥವಾ ನಿಯಂತ್ರಿತ ಪ್ರದೇಶದ ಬಗ್ಗೆ ಘೋಷಣೆಯ ಪರಿಣಾಮ.
14. ಲೈಸೆನ್ಸಿಗಾಗಿನ ಅರ್ಜಿ.
15. ಲೈಸೆನ್ಸಿನ ಮಂಜೂರಾತಿ ಅಥವಾ ನಿರಾಕರಣೆ.
16. ಲೈಸೆನ್ಸಿನ ರದ್ದಿಯಾತಿ.

17. ಅಪೀಲು,

18. ಅನಧಿಕೃತ ಕಟ್ಟಡಗಳನ್ನು ತೆಗೆದು ಹಾಕುವುದು.

19. ದಂಡನೆ.

## ಅಧ್ಯಾಯ–V

**ಸಂರಕ್ಷಿತ ಸ್ಮಾರಕಗಳನ್ನು ಪ್ರತಿ ಮಾಡುವುದು ಮತ್ತು ಫಿಲಂ ತೆಗೆಯುವುದು.**

20. ಕೆಲವು ಸ್ಮಾರಕಗಳನ್ನು ಪ್ರತಿ ಮಾಡುವುದಕ್ಕಾಗಿ ಅನುಮತಿಯ ಅಗತ್ಯತೆ.

21. ಇತರ ಸ್ಮಾರಕಗಳನ್ನು ಪ್ರತಿ ಮಾಡುವ ಬಗ್ಗೆ ಷರತ್ತುಗಳು.

22. ಫಿಲಂ ತೆಗೆಯುವುದಕ್ಕಾಗಿ ಲೈಸೆನ್ಸಿನ ಅಗತ್ಯತೆ.

23. ಲೈಸೆನ್ಸಿಗಾಗಿ ಅರ್ಜಿ.

24. ಲೈಸೆನ್ಸಿನ ಮಂಜೂರಾತಿ ಅಥವಾ ನಿರಾಕರಣೆ.

25. ಲೈಸನ್ಸ್ ರದ್ದಿಯಾತಿ.

26. ಅಪೀಲು.

27. ಕೆಲವು ನಿಯಮಗಳಿಗೆ ಬಾಧಕವಾಗತಕ್ಕದಲ್ಲ.

28. ದಂಡನೆ.

## ಅಧ್ಯಾಯ–VI

**ಸಂಕೀರ್ಣ.**

29. ಅಪೀಲು ಸಲ್ಲಿಸುವ ರೀತಿ.

30. ಆದೇಶಗಳ ಮತ್ತು ನೋಟೀಸುಗಳ ಜಾರಿ.

31. ನಿರಸನ ಮತ್ತು ಉಳಿಸುವಿಕೆಗಳು.

## ಅನುಸೂಚಿ

ನಮೂನೆ I ರಿಂದ ನಮೂನೆ V

ಶಿಕ್ಷಣ ಸಚಿವಾಲಯ

## ಅಧಿಸೂಚನೆ

### ಬೆಂಗಳೂರು, ದಿನಾಂಕ 7ನೇ ಜೂನ್ 1966

ಜಿ.ಎಸ್.ಆರ್. 1021 — ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ 1962ರ 7ದ) 31ನೇ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸುತ್ತದೆ, ಅವುಗಳ ಕರಡನ್ನು, ಸದರಿ ಪ್ರಕರಣದ (1)ನೇ ಉಪಪ್ರಕಣದ ಮೂಲಕ ಅಗತ್ಯಪಡಿಸಿದಂತೆ ಅಧಿಸೂಚನೆ ಕ್ರಮಾಂಕ ಇಡಿ 16 ಎಸ್.ಎ.ಆರ್. 64 ದಿನಾಂಕ 23/25ನೇ ನವೆಂಬರ್ 1965—ಇದರಲ್ಲಿ 1965ನೇ ಡಿಸೆಂಬರ್ 9ನೇ ದಿನಾಂಕದ ಕರ್ನಾಟಕ ರಾಜಪತ್ರದ ಭಾಗ IV—2ಸಿ(i) ರಲ್ಲಿ ಜಿ.ಎಸ್.ಆರ್. 752 ಆಗಿ ಈ ಹಿಂದೆ ಪ್ರಕಟಿಸಲಾಗಿತ್ತು), ಎಂದರೆ:—

ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ನಿಯಮಗಳು, 1965

1. ಹೆಸರು.— ಈ ನಿಯಮಗಳನ್ನು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ನಿಯಮಗಳು, 1966 ಎಂದು ಕರೆಯತಕ್ಕದು.

2. ಪರಿಭಾಷೆಗಳು.— ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು—

(ಕ) "ಅಧಿನಿಯಮ" ಎಂದರೆ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1968 ಕರ್ನಾಟಕ ಅಧಿನಿಯಮ 1962ರ 7);

(ಖ) ಯಾವುದೇ ಕಟ್ಟಡದ "ನಿರ್ಮಾಣ" ವು ಅಸ್ತಿತ್ವದಲ್ಲಿರುವ ಕಟ್ಟಡಕ್ಕೆ ಸೇರ್ಪಡೆ ಅಥವಾ ಅದರ ಬದಲಾವಣೆಗಳನ್ನೂ ಒಳಗೊಳ್ಳುತ್ತದೆ;

(ಗ) "ಪ್ರತಿ ಮಾಡುವುದು" ಎಂದರೆ ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ ರೇಖಾಚಿತ್ರದ ಮೂಲಕ ಅಥವಾ ಛಾಯಾಚಿತ್ರದ ಮೂಲಕ ಅಥವಾ ಅಚ್ಚಿನ ಮೂಲಕ ಅಥವಾ ಅಚ್ಚೊತ್ತುವ ಮೂಲಕ ಪ್ರತಿಗಳನ್ನು ತಯಾರಿಸುವುದು ಮತ್ತು ಇದು, ಎಂಟು ಮಿಲಿಮೀಟರುಗಳಿಗಿಂತ ಹೆಚ್ಚಿಲ್ಲದ ಫಿಲಂಗಳನ್ನು ತೆಗೆದುಕೊಳ್ಳಲು ಸಮರ್ಥವಾಗಿರುವಂಥ ಮತ್ತು ಸ್ಟ್ಯಾಂಡನ್ನು ಉಪಯೋಗಿಸುವುದು ಅಗತ್ಯವಿಲ್ಲದಂಥ ಅಥವಾ ಯಾವುದೇ ವಿಶೇಷ ಪೂರ್ವ ವ್ಯವಸೆ ಯನ್ನು ಒಳಗೊಂಡಿಲ್ಲದಂಥ ಕೈ ಕ್ಯಾಮರಾದ ಸಹಾಯದಿಂದ ಚಲನಚಿತ್ರ ಫಿಲಂಮಿನ ತಯಾರಿಕೆಯನ್ನು ಒಳಗೊಳ್ಳುತ್ತದೆ;

(ಫ) "ಫಿಲಂ ತೆಗೆಯುವುದು" ಎಂದರೆ ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ ಎಂಟು ಮಿಲಿಮೀಟರುಗಳಿಗಿಂತ ಹೆಚ್ಚಾದ ಫಿಲಂಗಳನ್ನು ತೆಗೆದುಕೊಳ್ಳಲು ಸಮರ್ಥವಾದಂಥ ಮತ್ತು ಸ್ಟ್ಯಾಂಡನ್ನು ಉಪಯೋಗಿಸುವುದು ಅಗತ ವಿರುವಂಥ ಅಥವಾ ಇತರ ವಿಶೇಷ ಪೂರ್ವ ವ್ಯವಸ್ಥೆಗಳನ್ನು ಒಳಗೊಳ್ಳುವಂಥ ಕ್ಯಾಮರಾದ ಸಹಾಯದಿಂದ ಚಲನಚಿತ್ರ ಫಿಲಂಮಿನ ತಯಾರಿಕೆ;

(ಙ) "ನಮೂನೆ" ಎಂದರೆ ಅನುಸೂಚಿಯಲ್ಲಿ ನಿರೂಪಿಸಿದ ನಮೂನೆ;

(ಚ) "ಗಣಿ ಕಾರ್ಯಾಚರಣೆ" ಎಂದರೆ ಖನಿಜಗಳನ್ನು ಶೋಧಿಸುವ ಉದ್ದೇಶಕ್ಕಾಗಿ ಅಥವಾ ಅವುಗಳನ್ನು ಪಡೆಯುವುದಕ್ಕಾಗಿನ ಯಾವುದೇ ಕಾರ್ಯಾಚರಣೆ ಮತ್ತು ಇದು ಕಲ್ಲು ಗಣಿ ಕೆಲಸ, ಉತ್ಖನನ, ಆಸ್ಫೋಟನೆ ಮತ್ತು ಅದೇ ಸ್ವರೂಪದ ಯಾವುದೇ ಕಾರ್ಯಾಚರಣೆಯನ್ನು ಒಳಗೊಳ್ಳುತ್ತದೆ ;

(ಛ) "ನಿಷೇಧಿತ ಪ್ರದೇಶ" ಅಥವಾ "ನಿಯಂತ್ರಿತ ಪ್ರದೇಶ" ಎಂದರೆ ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗಣಿ ಕಾರ್ಯಾಚರಣೆಯ ಅಥವಾ ನಿರ್ಮಾಣದ ಉದ್ದೇಶಗಳಿಗಾಗಿ ಅಥವಾ ಅವೆರಡೂ ಉದ್ದೇಶಗಳಿಗಾಗಿ ನಿಷೇಧಿತ ಪ್ರದೇಶ ಅಥವಾ ಸಂದರ್ಭಾನುಸಾರ ನಿಯಂತ್ರಿತ ಪ್ರದೇಶವೆಂದು ಘೋಷಿಸಿದಂಥ ಸಂರಕ್ಷಿತ ಸ್ಮಾರಕದ ಹತ್ತಿರವಿರುವ ಅಥವಾ ಅದಕ್ಕೆ ಲಗತ್ತಾದ ಪ್ರದೇಶ;

(ಜ) "ಅನುಸೂಚಿ" ಎಂದರೆ ಈ ನಿಯಮಗಳಿಗೆ ಅನುಬಂಧಿಸಿದ ಅನುಸೂಚಿ; ಮತ್ತು

(ಝ) "ಪ್ರಕರಣ" ಎಂದರೆ ಅಧಿನಿಯಮದ ಒಂದು ಪ್ರಕರಣ.

## ಅಧ್ಯಾಯ—II

### ಸಂರಕ್ಷಿತ ಸ್ಮಾರಕಗಳಿಗೆ ಪ್ರವೇಶಾವಕಾಶ

3. ಒಪ್ಪಂದದ ಮೂಲಕ ನಿಯಂತ್ರಿತವಾದ ಸ್ಮಾರಕಗಳು.—(1) ಯಾವುದಕ್ಕೆ ಸಂಬಂಧಿಸಿದಂತೆ 6ನೇ ಪ್ರಕರಣದ ಮೇರೆಗೆ ಒಡೆಯ ಮತ್ತು ರಾಜ್ಯ ಸರ್ಕಾರದ ನಡುವೆ ಒಂದು ಒಪ್ಪಂದವನ್ನು ಮಾಡಿಕೊಳ್ಳಲಾಗಿದೆಯೋ ಅಥವಾ ಯಾವುದಕ್ಕೆ ಸಂಬಂಧಿಸಿದಂತೆ 9ನೇ ಪ್ರಕರಣದ ಮೇರೆಗೆ ಸರ್ಕಾರವು ಒಂದು ಆದೇಶವನ್ನು ಮಾಡಿದೆಯೋ ಆ ಸಂರಕ್ಷಿತ ಸ್ಮಾರಕಗಳಿಗೆ ಪ್ರವೇಶಾವಕಾಶವು, ಆ ಒಪ್ಪಂದದ ಉಪಬಂಧಗಳ ಮೂಲಕ ಅಥವಾ ಸಂದರ್ಭಾನುಸಾರ ಆದೇಶದ ಮೂಲಕ ನಿಯಂತ್ರಿತವಾಗತಕ್ಕದ್ದು ; ಮತ್ತು 4ನೇ ಅಥವಾ 5ನೇ ನಿಯಮದಲ್ಲಿ ಇರುವುದು ಯಾವುದೂ, ಯಾವುದೇ ಅಂಥ ಒಪ್ಪಂದ ಅಥವಾ ಆದೇಶಕ್ಕೆ ಬಾಧಕವನ್ನುಂಟು ಮಾಡುವುದೆಂದು ಅರ್ಥೈಸತಕ್ಕದ್ದಲ್ಲ.

(2) ಪ್ರತಿಯೊಂದು ಅಂಥ ಒಪ್ಪಂದ ಅಥವಾ ಆದೇಶದ ಸುಸಂಗತ ಉಪಬಂಧಗಳ ಪ್ರತಿಯನ್ನು ಸಂಬಂಧಪಟ್ಟ ಸ್ಮಾರಕದ ಎದ್ದು ಕಾಣುವ ಭಾಗದಲ್ಲಿ ಪ್ರದರ್ಶಿಸತಕ್ಕದ್ದು.

4. ಮುಕ್ತವಾಗಿಲ್ಲದ ಸ್ಮಾರಕದ ಭಾಗಗಳು.—ನಿರ್ದೇಶಕನು ಆದೇಶದ ಮೂಲಕ ಒಂದು ಸಂರಕ್ಷಿತ ಸ್ಮಾರಕದ ಯಾವುದೇ ನಿರ್ದಿಷ್ಟಪಡಿಸಿದ ಭಾಗವನ್ನು ನಿರ್ದೇಶಕ, ಅವನ ಏಜೆಂಟರು, ಅಧೀನರು ಮತ್ತು ಕೆಲಸಗಾರರು ಮತ್ತು ಅಂಥ ಭಾಗದಲ್ಲಿ ಕರ್ತವ್ಯದ ಮೇಲಿರುವ ಯಾವನೇ ಇತರ ಸರ್ಕಾರಿ ನೌಕರನನ್ನು ಹೊರತುಪಡಿಸಿ ಯಾವನೇ ವ್ಯಕ್ತಿಗೆ ಖಾಯಂ ಆಗಿ ಅಥವಾ ನಿರ್ದಿಷ್ಟಪಡಿಸಿದ ಅವಧಿಗಾಗಿ, ಮುಕ್ತವಿರತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

5. ಸ್ಮಾರಕಗಳಲ್ಲಿ ಸಭೆ, ಇತ್ಯಾದಿಗಳನ್ನು ನಡೆಸುವುದು.—(1) ಯಾವುದೇ ಸಂರಕ್ಷಿತ ಸ್ಮಾರಕಗಳನ್ನು, ಸರ್ಕಾರವು ಬರಹದಲ್ಲಿ ಮಂಜೂರು ಮಾಡಿದ ಅನುಮತಿಯ ಮೇರೆಗೆ ಮತ್ತು ಅದಕ್ಕೆ ಅನುಸಾರವಾಗಿ ಅಲ್ಲದೆ ಯಾವುದೇ ಸಭೆ, ಸತ್ಕಾರ, ಸಂತೋಷ ಕೂಟ, ಸಮ್ಮೇಳನ ಅಥವಾ ಮನರಂಜನೆಗಳನ್ನು ನಡೆಸುವ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

(2) (1)ನೇ ಉಪನಿಯಮದಲ್ಲಿರುವುದು ಯಾವುದೂ, ಮನ್ನಣೆ ಪಡೆದ ಧಾರ್ಮಿಕ ಆಚರಣೆಯ ಅಥವಾ ರೂಢಿಯ ಅನುಸರಣೆಯಲ್ಲಿ ನಡೆಸಲಾಗುವಂಥ ಯಾವುದೇ ಸಭೆ, ಸತ್ಕಾರ, ಸಂತೋಷ ಕೂಟ, ಸಮ್ಮೇಳನ ಅಥವಾ ಮನರಂಜನೆಗೆ ಅನ್ವಯವಾಗತಕ್ಕದ್ದಲ್ಲ.

6. ಸ್ಮಾರಕದ ಒಳಗೆ ಕೆಲವು ಕಾರ್ಯಗಳ ನಿಷೇಧ.—ಯಾವನೇ ವ್ಯಕ್ತಿಯು ಒಂದು ಸಂರಕ್ಷಿತ ಸ್ಮಾರಕದೊಳಗೆ,—

(ಕ) ಆ ಸ್ಮಾರಕದ ಯಾವುದೇ ಭಾಗಕ್ಕೆ ಹಾನಿ ಅಥವಾ ನಷ್ಟವನ್ನು ಉಂಟು ಮಾಡುವ ಸಂಭವವಿರುವಂಥ ಯಾವುದೇ ಕಾರ್ಯವನ್ನು ಮಾಡತಕ್ಕದ್ದಲ್ಲ; ಅಥವಾ

(ಖ) ಯಾವುವೇ ಬಂದೂಕುಗಳನ್ನು ಹಾರಿಸತಕ್ಕದ್ದಲ್ಲ; ಅಥವಾ

(ಗ) ಆ ಉದ್ದೇಶಕ್ಕಾಗಿ ಉಪಯೋಗಿಸಲು ಅನುಮತಿಸಿದ ಪ್ರದೇಶಗಳು ಯಾವುದಾದರೂ ಇದ್ದರೆ, ಅವುಗಳಲ್ಲಿ ಹೊರತು ಆಹಾರವನ್ನು ಅಡಿಗೆ ಮಾಡತಕ್ಕದ್ದಲ್ಲ ಅಥವಾ ತಿನ್ನತಕ್ಕದ್ದಲ್ಲ; ಅಥವಾ

(ಘ) ನಿರ್ದೇಶಕನು ಮಂಜೂರುಮಾಡಿದ ಲೈಸೆನ್ಸಿನ ಅಧಿಕಾರದ ಮೇರೆಗೆ ಅಥವಾ ಅದರ ಷರತ್ತುಗಳ ಮೇರೆಗೆ ಅಥವಾ ಅವುಗಳಿಗನುಸಾರವಾಗಿ ಅಲ್ಲದೇ, ಯಾವುದೇ ಸರಕುಗಳು ಅಥವಾ ಜಿನಸುಗಳನ್ನು ತಿರುಗಾಡಿ ಮಾರತಕ್ಕದ್ದಲ್ಲ ಅಥವಾ ಮಾರಾಟ ಮಾಡತಕ್ಕದ್ದಲ್ಲ ಅಥವಾ ಅಂಥ ಸರಕುಗಳು ಅಥವಾ ಜಿನಸುಗಳಿಗಾಗಿ ಯಾವನೇ ಗಿರಾಕಿಯನ್ನು ಬೇಡತಕ್ಕ

ವಲ್ಲ ಅಥವಾ ಯಾವುದೇ ರೂಪದಲ್ಲಿ ಯಾವುದೇ ಜಾಹೀರಾತನ್ನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಹಣದ ಪ್ರತಿಫಲಕ್ಕಾಗಿ ಸಂದರ್ಶಕನನ್ನು ತೋರಿಸಲು ಕರೆದುಕೊಂಡು ಹೋಗತಕ್ಕದ್ದಲ್ಲ ; ಅಥವಾ

(ಜ) ಭಿಕ್ಷೆ ಬೇಡತಕ್ಕದ್ದಲ್ಲ; ಅಥವಾ

(ಝ) ಆ ಸ್ಮಾರಕಕ್ಕೆ ಅನ್ವಯವಾಗುವ ಅಥವಾ ಅದರಲ್ಲಿ ಪಾಲಿಸುತ್ತಿರುವ ಯಾವುದೇ ಪದ್ಧತಿ, ಆಚರಣೆ, ಅಥವಾ ರೂಢಿಯನ್ನು ಉಲ್ಲಂಘಿಸತಕ್ಕದ್ದಲ್ಲ ; ಅಥವಾ

(ಞ) ಆ ಸ್ಮಾರಕವನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡು ಬರುವುದಕ್ಕಾಗಿ ಹೊರತು ಯಾವುದೇ ಇತರ ಉದ್ದೇಶಕ್ಕಾಗಿ,—

(i) ಯಾವುದೇ ಪ್ರಾಣಿಯನ್ನು ; ಅಥವಾ

(ii) ಯಾವುದೇ ವಾಹನವನ್ನು, ಅದನ್ನು ಬಿಡುವುದಕ್ಕಾಗಿ ಕಾಯ್ದಿಟ್ಟ ಪ್ರದೇಶಗಳಲ್ಲಿ ಹೊರತು, ಇತರ ಪ್ರದೇಶಗಳಲ್ಲಿ

— ತರತಕ್ಕದ್ದಲ್ಲ.

7. ದಂಡನೆ.— ಯಾರೇ ಆಗಲಿ,—

(i) ಯಾವುದೇ ಸಂರಕ್ಷಿತ ಸ್ಮಾರಕ ಅಥವಾ ಅದರ ಭಾಗದ ಒಳಕ್ಕೆ ಈ ನಿಯಮದ ಮೇರೆಗೆ ಅದನ್ನು ಮುಕ್ತವಾಗಿ ಇಟ್ಟಿಲ್ಲದೆ ಇರುವಾಗಿನ ಕಾಲದಲ್ಲಿ ಕಾನೂನು ಬಾಹಿರವಾಗಿ ಪ್ರವೇಶಿಸಿದರೆ, ಅಥವಾ

(ii) 5ನೇ ಅಥವಾ 6ನೇ ನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ ಅವನು ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

## ಅಧ್ಯಾಯ—III

### ಕೆಲವು ಪ್ರದೇಶಗಳಿಂದ ಪುರಾತನ ವಸ್ತುಗಳ ಸ್ಥಳ ಬದಲಾವಣೆ

8. ಪುರಾತನ ವಸ್ತುಗಳ ಸ್ಥಳ ಬದಲಾವಣೆಗಾಗಿ ಅರ್ಜಿ.—ಯಾವುದಕ್ಕೆ ಸಂಬಂಧಿಸಿದಂತೆ 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆಯೋ ಆ ಯಾವುದೇ ಪುರಾತನ ವಸ್ತುಗಳನ್ನು ಅಥವಾ ಯಾವುದೇ ವರ್ಗದ ಪುರಾತತ್ವವಸ್ತುಗಳನ್ನು ಸ್ಥಳ ಬದಲಾಯಿಸಲು ಅನುಮತಿಗಾಗಿನ, ಪ್ರತಿಯೊಂದು ಅರ್ಜಿಯನ್ನು, ಆ ಸ್ಥಳ ಬದಲಾಯಿಸಲು ಉದ್ದೇಶಿಸಿದ ದಿನಾಂಕಕ್ಕೆ ಕನಿಷ್ಠ ಪಕ್ಷ ಮೂರು ತಿಂಗಳುಗಳಿಗೆ ಮುಂಚೆ ನಮೂನೆ I ರಲ್ಲಿ ನಿರ್ದೇಶಕನಿಗೆ ಮಾಡಿಕೊಳ್ಳತಕ್ಕದ್ದು.

9. ಅನುಮತಿಯ ಮಂಜೂರಾತಿ ಅಥವಾ ನಿರಾಕರಣೆ.—8ನೇ ನಿಯಮದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ ನಿರ್ದೇಶಕನು, ಅವನು ಅವಶ್ಯವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ, ಎಲ್ಲಾ ಅಥವಾ ಯಾವುದೇ ಪುರಾತನ ವಸ್ತುಗಳನ್ನು ಸ್ಥಳ ಬದಲಾಯಿಸುವುದಕ್ಕಾಗಿ ಅನುಮತಿಯನ್ನು ಕೊಡಬಹುದು ಅಥವಾ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಅಂಥ ಅನುಮತಿಯನ್ನು ನಿರಾಕರಿಸಬಹುದು.

10. ಅಪೀಲು.— 9ನೇ ನಿಯಮದ ಮೇರೆಗಿನ ನಿರ್ದೇಶಕನ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು ಮತ್ತು ಅಂಥ ಅಪೀಲಿನ ಬಗ್ಗೆ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

## ಅಧ್ಯಾಯ—IV

## ಸಂರಕ್ಷಿತ ಸ್ಮಾರಕಗಳ ಹತ್ತಿರ ಗಣಿ ಕಾರ್ಯಾಚರಣೆ ಮತ್ತು ನಿರ್ಮಾಣ

11. ನಿಷೇಧಿತ ಅಥವಾ ನಿಯಂತ್ರಿತ ಪ್ರದೇಶವನ್ನು ಘೋಷಿಸಲು ಉದ್ದೇಶಿಸುವ ಅಧಿಸೂಚನೆ.— (1) ಸಂರಕ್ಷಿತ ಸ್ಮಾರಕದ ಹತ್ತಿರದ ಅಥವಾ ಅದಕ್ಕೆ ಲಗತ್ತಾದ ಪ್ರದೇಶವನ್ನು ಗಣಿ ಕಾರ್ಯಾಚರಣೆ ಅಥವಾ ನಿರ್ಮಾಣ ಅಥವಾ ಎರಡೂ ಉದ್ದೇಶಗಳಿಗಾಗಿ ನಿಷೇಧಿತ ಪ್ರದೇಶ ಅಥವಾ ನಿಯಂತ್ರಿತ ಪ್ರದೇಶವೆಂಬುದಾಗಿ ಘೋಷಿಸುವುದಕ್ಕೆ ಮುಂಚೆ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಹಾಗೆ ಮಾಡುವ ಅದರ ಉದ್ದೇಶದ ಬಗ್ಗೆ ಒಂದು ತಿಂಗಳ ನೋಟೀಸನ್ನು ಕೊಡತಕ್ಕದ್ದು ಮತ್ತು ಅಂಥ ಅಧಿಸೂಚನೆಯ ಒಂದು ಪ್ರತಿಯನ್ನು ಆ ಪ್ರದೇಶದ ಹತ್ತಿರದ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕದ್ದು.

(2) ಅಂಥ ಪ್ರತಿಯೊಂದು ಅಧಿಸೂಚನೆಯು, ಹಾಗೆ ಘೋಷಿಸಬೇಕಾಗಿರುವಂಥ ಪ್ರದೇಶದ ಪರಿಮಿತಿಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಹಿತಾಸಕ್ತಿಯನ್ನು ಹೊಂದಿರುವ ವ್ಯಕ್ತಿಗಳಿಂದ ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಕೋರತಕ್ಕದ್ದು.

12. ನಿಷೇಧಿತ ಅಥವಾ ನಿಯಂತ್ರಿತ ಪ್ರದೇಶದ ಬಗ್ಗೆ ಘೋಷಣೆ.— 11ನೇ ನಿಯಮದ ಮೇರೆಗಿನ ಅಧಿಸೂಚನೆಯ ದಿನಾಂಕದಿಂದ ಒಂದು ತಿಂಗಳು ಮುಕ್ತಾಯವಾದ ತರುವಾಯ ಮತ್ತು ಸದರಿ ಅವಧಿಯೊಳಗೆ ಸ್ವೀಕರಿಸಿದ ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಪರ್ಯಾಲೋಚಿಸಿದ ತರುವಾಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, 11ನೇ ನಿಯಮದ ಮೇರೆಗಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶವನ್ನು ಅಥವಾ ಅಂಥ ಪ್ರದೇಶದ ಯಾವುದೇ ಭಾಗವನ್ನು ಗಣಿ ಕಾರ್ಯಾಚರಣೆ ಅಥವಾ ನಿರ್ಮಾಣ ಅಥವಾ ಎರಡೂ ಉದ್ದೇಶಗಳಿಗಾಗಿ ನಿಷೇಧಿತ ಪ್ರದೇಶ ಅಥವಾ ಸಂದರ್ಭಾನುಸಾರ ನಿಯಂತ್ರಿತ ಪ್ರದೇಶವೆಂಬುದಾಗಿ ಘೋಷಿಸಬಹುದು

13. ನಿಷೇಧಿತ ಅಥವಾ ನಿಯಂತ್ರಿತ ಪ್ರದೇಶದ ಬಗ್ಗೆ ಘೋಷಣೆಯ ಪರಿಣಾಮ.— ನಿರ್ದೇಶಕನನ್ನು ಹೊರತುಪಡಿಸಿ, ಯಾವನೇ ವ್ಯಕ್ತಿಯು, ಆ ನಿರ್ದೇಶಕನು ಮಂಜೂರು ಮಾಡಿದ ಲೈಸೆನ್ಸಿನ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ಮತ್ತು ಅವುಗಳಿಗೆ ಅನುಸಾರವಾಗಿಯಲ್ಲದೆ—

(ಕ) ನಿಷೇಧಿತ ಪ್ರದೇಶದಲ್ಲಿ, ಅಥವಾ

(ಖ) ನಿಯಂತ್ರಿತ ಪ್ರದೇಶದಲ್ಲಿ

—ಯಾವುದೇ ಗಣಿ ಕಾರ್ಯಾಚರಣೆಯನ್ನು ಅಥವಾ ಯಾವುದೇ ನಿರ್ಮಾಣವನ್ನು ಕೈಗೊಳ್ಳತಕ್ಕದಲ್ಲ.

14. ಲೈಸೆನ್ಸಿಗಾಗಿನ ಅರ್ಜಿ.— ನಿಯಂತ್ರಿತ ಪ್ರದೇಶದಲ್ಲಿ ಯಾವುದೇ ಗಣಿ ಕಾರ್ಯಾಚರಣೆಯನ್ನು ಅಥವಾ ಯಾವುದೇ ನಿರ್ಮಾಣವನ್ನು ಕೈಗೊಳ್ಳಲು ಉದ್ದೇಶಿಸುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ಗಣಿ ಕಾರ್ಯಾಚರಣೆ ಅಥವಾ ನಿರ್ಮಾಣವನ್ನು ಪ್ರಾರಂಭಿಸುವ ದಿನಾಂಕಕ್ಕೆ ಕನಿಷ್ಠ ಪಕ್ಷ ಮೂರು ತಿಂಗಳುಗಳಿಗೆ ಮುಂಚೆ ನಮೂನೆ IIರಲ್ಲಿ ನಿರ್ದೇಶಕನಿಗೆ ಅರ್ಜಿ ಸಲ್ಲಿಸತಕ್ಕದ್ದು.

15. ಲೈಸೆನ್ಸಿನ ಮಂಜೂರಾತಿ ಅಥವಾ ನಿರಾಕರಣೆ.— (1) 14ನೇ ನಿಯಮದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ ನಿರ್ದೇಶಕನು, ಲೈಸೆನ್ಸನ್ನು ಮಂಜೂರು ಮಾಡಬಹುದು ಅಥವಾ ಕೋರಲಾದ ಲೈಸೆನ್ಸನ್ನು ಮಂಜೂರು ಮಾಡತಕ್ಕುದಲ್ಲವೆಂದು ಅವನಿಗೆ ಮನದಟ್ಟಾದರೆ, ದಾಖಲು ಮಾಡಬೇಕಾದ ಕಾರಣಗಳಿಗಾಗಿ ಲೈಸೆನ್ಸನ್ನು ಮಂಜೂರು ಮಾಡಲು ನಿರಾಕರಿಸಬಹುದು.

(2) (1)ನೇ ಉಪನಿಯಮದ ಮೇರೆಗೆ ಮಂಜೂರು ಮಾಡಿದ ಪ್ರತಿಯೊಂದು ಲೈಸೆನ್ಸು ನಮೂನೆ IIIರಲ್ಲಿ ಇರತಕ್ಕದ್ದು ಮತ್ತು ಅದು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಎಂದರೆ :—

(ಕ) ಆ ಲೈಸೆನ್ಸು ವರ್ಗಾವಣೆಯವಾಗಿರತಕ್ಕುದಲ್ಲ ;

(ಖ) ಅದು, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಗಾಗಿ ಸಿಂಧುವಾಗಿರತಕ್ಕದ್ದು ; ಮತ್ತು

(ಗ) ಆ ಸಂರಕ್ಷಿತ ಸ್ಮಾರಕದ ಸುರಕ್ಷತೆ ಮತ್ತು ಸ್ವರೂಪವನ್ನು ಮತ್ತು ಅದರ ಬಳಿ ಹೋಗುವ ದಾರಿ ಮತ್ತು ಅದಕ್ಕೆ ಪ್ರವೇಶವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಲೈಸೆನ್ಸಿನಲ್ಲಿ ನಿರ್ದೇಶಕನು ನಿರ್ದಿಷ್ಟಪಡಿಸಬಹುದಾದಂಥ, ಗಣಿ ಕಾರ್ಯಾಚರಣೆ ಅಥವಾ ನಿರ್ಮಾಣವನ್ನು ಕಾರ್ಯಗತ ಮಾಡುವ ರೀತಿಗೆ ಸಂಬಂಧಪಟ್ಟ ಯಾವುದೇ ಇತರ ಷರತ್ತು.

16. ಲೈಸೆನ್ಸಿನ ರದ್ದಿಯಾತಿ.—ನಿರ್ದೇಶಕನು, ಆದೇಶದ ಮೂಲಕ 15ನೇ ನಿಯಮದ ಮೇರೆಗೆ ಮಂಜೂರುಮಾಡಿದ ಲೈಸೆನ್ಸನ್ನು, ಅದರ ಯಾವುದೇ ಷರತ್ತನ್ನು ಉಲ್ಲಂಘಿಸಲಾಗಿದೆ ಎಂದು ಅವನಿಗೆ ಮನದಟ್ಟಾದರೆ, ರದ್ದುಪಡಿಸಬಹುದು :

ಪರಂತು, ಯಾವುದೇ ಲೈಸೆನ್ಸನ್ನು ಲೈಸೆನ್ಸ್‌ದಾರನಿಗೆ ಅವನ ಆಕ್ಷೇಪಣೆಗಳನ್ನು ಮಾಡಿಕೊಳ್ಳಲು ಅವಕಾಶವನ್ನು ಕೊಟ್ಟಿದ್ದ ಹೊರತು, ರದ್ದುಗೊಳಿಸತಕ್ಕದ್ದಲ್ಲ.

17. ಅಪೀಲು.—15ನೇ ನಿಯಮ ಅಥವಾ 16ನೇ ನಿಯಮದ ಮೇರೆಗೆ ಮಾಡಿದ ನಿರ್ದೇಶಕನ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು ; ಮತ್ತು ಅಂಥ ಅಪೀಲಿನ ಬಗ್ಗೆ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

18. ಅನಧಿಕೃತ ಕಟ್ಟಡಗಳನ್ನು ತೆಗೆದುಹಾಕುವುದು.—(1) ಸರ್ಕಾರವು, ಆದೇಶದ ಮೂಲಕ ಒಂದು ನಿಷೇಧಿತ ಪ್ರದೇಶದಲ್ಲಿರುವ ಅಥವಾ ಒಂದು ನಿಯಂತ್ರಿತ ಪ್ರದೇಶದಲ್ಲಿರುವ ಒಂದು ಅನಧಿಕೃತ ಕಟ್ಟಡ ಅಥವಾ 15ನೇ ನಿಯಮದ ಮೇರೆಗೆ ಮಂಜೂರುಮಾಡಿದ ಲೈಸೆನ್ಸಿನ ಯಾವುದೇ ಷರತ್ತನ್ನು ಉಲ್ಲಂಘಿಸಿ ನಿರ್ಮಿಸಲಾಗಿರುವಂಥ ಕಟ್ಟಡದ ಅಥವಾ ಅದರ ಭಾಗದ ಒಡೆಯ ಅಥವಾ ಅನುಭೋಗದಾರನಿಗೆ ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ಕಟ್ಟಡ ಅಥವಾ ಅದರ ಭಾಗವನ್ನು ತೆಗೆದುಹಾಕಲು ನಿರ್ದೇಶಿಸಬಹುದು.

(2) ಆ ಒಡೆಯ ಅಥವಾ ಅಧಿಭೋಗದಾರನು, (1)ನೇ ಉಪನಿಯಮದ ಮೇರೆಗೆ ಮಾಡಿದ ಆದೇಶವನ್ನು ಪಾಲಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ ಸರ್ಕಾರವು ಆ ಕಟ್ಟಡ ಅಥವಾ ಅದರ ಭಾಗವನ್ನು ತೆಗೆದುಹಾಕುವಂತೆ ಮಾಡಲು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ನಿರ್ದೇಶಿಸಬಹುದು ಮತ್ತು ಅಂಥ ತೆಗೆದುಹಾಕುವಿಕೆಯ ಬಗ್ಗೆ ಖರ್ಚನ್ನು ಸಂದಾಯ ಮಾಡಲು ಒಡೆಯ ಅಥವಾ ಅಧಿಭೋಗದಾರನು ಹೊಣೆಗಾರನಾಗಿರತಕ್ಕದ್ದು.

19. ದಂಡನೆ.—ಯಾರೇ ಆಗಲಿ—

(i) ಒಂದು ನಿಷೇಧಿತ ಪ್ರದೇಶದಲ್ಲಿ ಅಥವಾ ಒಂದು ನಿಯಂತ್ರಿತ ಪ್ರದೇಶದಲ್ಲಿ ಯಾವುದೇ ಗಣಿ ಕಾರ್ಯಾಚರಣೆಯನ್ನು ಅಥವಾ ನಿರ್ಮಾಣವನ್ನು ಕಾನೂನು ಬಾಹಿರವಾಗಿ ಕೈಗೊಂಡರೆ, ಅಥವಾ

(ii) ಲೈಸೆನ್ಸಿನ ಯಾವುದೇ ಷರತ್ತನ್ನು ಉಲ್ಲಂಘಿಸಿದರೆ, ಅಥವಾ

(iii) 18ನೇ ನಿಯಮದ (1)ನೇ ಉಪನಿಯಮದ ಮೇರೆಗೆ ಮಾಡಿದ ಆದೇಶವನ್ನು ಪಾಲಿಸಲು ತಪ್ಪಿದರೆ ಅಥವಾ ತಿರಸ್ಕರಿಸಿದರೆ

—ಅವನು ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

ಅಧ್ಯಾಯ–V

## ಸಂರಕ್ಷಿತ ಸ್ಮಾರಕಗಳನ್ನು ಪ್ರತಿ ಮಾಡುವುದು ಮತ್ತು ಫಿಲಂ ತೆಗೆಯುವುದು.

20. **ಕೆಲವು ಸ್ಮಾರಕಗಳನ್ನು ಪ್ರತಿ ಮಾಡುವುದಕ್ಕಾಗಿ ಅನುಮತಿಯ ಅಗತ್ಯತೆ.**– ನಿರ್ದೇಶಕನು, ಆದೇಶದ ಮೂಲಕ, ಈ ಬಗ್ಗೆ ಅವನು ಅಧಿಕೃತಗೊಳಿಸಿದ ಅಧಿಕಾರಿಯನ್ನು ಹೊರತುಪಡಿಸಿ ಯಾವನೇ ವ್ಯಕ್ತಿಯು, ನಿರ್ದೇಶಕನು ಬರಹದಲ್ಲಿ ಕೊಟ್ಟ ಅನುಮತಿಯ ಮೇರೆಗೆ ಮತ್ತು ಅದರ ನಿಬಂಧನೆಗಳು ಮತ್ತು ಷರತ್ತುಗಳಿಗನುಸಾರವಾಗಿ ಅಲ್ಲದೆ, ನಿರ್ದಿಷ್ಟಪಡಿಸಿದ ಯಾವುದೇ ಸ್ಮಾರಕ ಅಥವಾ ಅದರ ಭಾಗವನ್ನು ಪ್ರತಿ ಮಾಡತಕ್ಕುದಲ್ಲವೆಂದು ನಿರ್ದೇಶಿಸಬಹುದು.

21. **ಇತರ ಸ್ಮಾರಕಗಳನ್ನು ಪ್ರತಿ ಮಾಡುವ ಬಗ್ಗೆ ಷರತ್ತುಗಳು.**– (1) ಯಾವನೇ ವ್ಯಕ್ತಿಯು, 22ನೇ ನಿಯಮದ ಮೇರೆಗೆ ಯಾವುದೇ ಆದೇಶವನ್ನು ಮಾಡಿಲ್ಲದಂಥ ಸಂರಕ್ಷಿತ ಸ್ಮಾರಕಕ್ಕೆ ಸಂಬಂಧಿಸಿದಂತೆ ಪ್ರತಿಯನ್ನು ಮಾಡಬಹುದು.

(2) (1)ನೇ ಉಪನಿಯಮದಲ್ಲಿ ಇರುವುದು ಯಾವುದನ್ನೂ, ಅಂಥ ಯಾವುದೇ ಸ್ಮಾರಕದ ಪ್ರತಿಯನ್ನು ಮಾಡುವಲ್ಲಿ ನಿರ್ದೇಶಕ ಅಥವಾ ಈ ಬಗ್ಗೆ ನಿರ್ದೇಶಕನು ಅಧಿಕೃತಗೊಳಿಸಿದ ಅಧಿಕಾರಿಯನ್ನು ಹೊರತುಪಡಿಸಿ ಯಾವನೇ ವ್ಯಕ್ತಿಯನ್ನು—

(ಕ) ಅಂಥ ಸ್ಮಾರಕದ ಆವರಣಗಳೊಳಗೆ ಕ್ಯಾಮರಾ ಸ್ಟ್ಯಾಂಡು, ಸ್ಟೂಲು, ಕುರ್ಚಿ, ಮೇಜು, ದೊಡ್ಡ ಡ್ರಾಯಿಂಗ್ ಫಲಕ, ಚಿತ್ರಾಧಾರ ಅಥವಾ ಯಾವುದೇ ಅಂಥ ಉಪಕರಣವನ್ನು ಅದರೊಳಕ್ಕೆ ತರಲು ಅಥವಾ ಅದರೊಳಗೆ ಉಪಯೋಗಿಸಲು, ಅಥವಾ

(ಖ) ಅಂಥ ಆವರಣಗಳೊಳಗೆ ಯಾವುದೇ ಸೇತುವೆಯನ್ನು ನಿರ್ಮಿಸಲು, ಅಥವಾ

(ಗ) ಅಂಥ ಆವರಣಗಳೊಳಗೆ ಕ್ಯಾಮರವನ್ನು ಬೆಳಕಿಗೆ ಒಡ್ಡುವುದರೊಂದಿಗೆ ಸರಿಹೊಂದಿಸಿದ ಹೊಳಪು ಬೆಳಕನ್ನು ಹೊರತುಪಡಿಸಿ ಇತರ ಯಾವುದೇ ಕೃತಕ ಬೆಳಕನ್ನು ಉಪಯೋಗಿಸಲು, ಅಥವಾ

(ಘ) ಅಂಥ ಸ್ಮಾರಕ ಅಥವಾ ಅದರ ಭಾಗದ ಮೇಲೆ ನೀರು, ಎಣ್ಣೆ, ಗ್ರೀಸ್ ಅಥವಾ ಯಾವುದೇ ಅಚ್ಚು ಹೊಯ್ಯುವ ಸಾಮಗ್ರಿಯಂಥ ಯಾವುದೇ ಸಂಬಂಧಪಡದ ವಸ್ತುವನ್ನು ಲೇಪಿಸಲು, ಅಥವಾ

(ಙ) ನಿರ್ದೇಶಕನು ಬರಹದಲ್ಲಿ ಕೊಟ್ಟ ಅನುಮತಿಯ ಮೇರೆಗೆ ಮತ್ತು ಅದರ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿಯಲ್ಲದೆ ಅಂಥ ಸ್ಮಾರಕ ಅಥವಾ

ಆದರ ಭಾಗದ ನೇರ ಅನುರೇಖನ ಅಥವಾ ಅಚ್ಚು ಅಥವಾ ಅಚ್ಚೊತ್ತನ್ನು ಸಿದ್ಧಪಡಿಸಲು ಅಧಿಕೃತಗೊಳಿಸಲಾಗಿದೆಯೆಂದು ಅರ್ಥೈಸತಕ್ಕದಲ್ಲ.

22. ಫಿಲಂ ತೆಗೆಯುವುದಕ್ಕಾಗಿ ಲೈಸೆನ್ಸಿನ ಅಗತ್ಯತೆ.—ನಿರ್ದೇಶಕನು ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಅಧಿಕಾರಿಯನ್ನು ಹೊರತುಪಡಿಸಿ ಇತರ ಯಾವನೇ ವ್ಯಕ್ತಿಯು, 24ನೇ ನಿಯಮದ ಮೇರೆಗೆ ಮಂಜೂರು ಮಾಡಿದ ಲೈಸೆನ್ಸಿನ ಮೇರೆಗೆ ಮತ್ತು ಅದರ ನಿಬಂಧನೆಗಳು ಮತ್ತು ಷರತ್ತುಗಳ ಅನುಸಾರವಾಗಿಯಲ್ಲದೆ ಒಂದು ಸಂರಕ್ಷಿತ ಸ್ಮಾರಕ ಅಥವಾ ಅದರ ಭಾಗದಲ್ಲಿ ಯಾವುದೇ ಫಿಲ್ಮು ತೆಗೆಯುವ ಕಾರ್ಯಾಚರಣೆಯನ್ನು ಕೈಗೊಳ್ಳತಕ್ಕದಲ್ಲ.

23. ಲೈಸೆನ್ಸಿಗಾಗಿ ಅರ್ಜಿ.—ಒಂದು ಸಂರಕ್ಷಿತ ಸ್ಮಾರಕದಲ್ಲಿ ಯಾವುದೇ ಫಿಲ್ಮು ತೆಗೆಯುವ ಕಾರ್ಯಾಚರಣೆಯನ್ನು ಕೈಗೊಳ್ಳಲು ಉದ್ದೇಶಿಸುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಕಾರ್ಯಾಚರಣೆಯು ಪ್ರಾರಂಭವಾಗುವ ಪ್ರಸ್ತಾವಿತ ದಿನಾಂಕಕ್ಕೆ ಕನಿಷ್ಠ ಪಕ್ಷ ಮೂರು ತಿಂಗಳುಗಳಿಗೆ ಮುಂಚೆ ನಮೂನೆ IVರಲ್ಲಿ ನಿರ್ದೇಶಕನಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

24. ಲೈಸೆನ್ಸಿನ ಮಂಜೂರಾತಿ ಅಥವಾ ನಿರಾಕರಣೆ.—(1) 23ನೇ ನಿಯಮದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ನಿರ್ದೇಶಕನು, ಲೈಸೆನ್ಸನ್ನು ಮಂಜೂರು ಮಾಡಬಹುದು ಅಥವಾ ಕೋರಲಾದ ಲೈಸೆನ್ಸನ್ನು ಮಂಜೂರು ಮಾಡತಕ್ಕದಲ್ಲವೆಂದು ಅವನಿಗೆ ಮನದಟ್ಟಾದರೆ, ದಾಖಲು ಮಾಡಬೇಕಾದ ಕಾರಣಗಳಿಗಾಗಿ ಲೈಸೆನ್ಸನ್ನು ಮಂಜೂರುಮಾಡಲು ನಿರಾಕರಿಸಬಹುದು :

ಪರಂತು, ನಿರ್ದೇಶಕನು, ಯಾವುದೇ ಸಂರಕ್ಷಿತ ಸ್ಮಾರಕದ ಒಳಭಾಗವನ್ನು ಹಾಗೆಂದರೆ ಯಾವುದೇ ವಿವರಣೆಯ ಛಾವಣಿಯಿಂದ ಆವೃತವಾಗಿರುವ ಯಾವುದೇ ಸಂರಕ್ಷಿತ ಸ್ಮಾರಕದ ಅಂಥ ಭಾಗವನ್ನು ಆ ಫಿಲ್ಮು ಶೈಕ್ಷಣಿಕ ಅಥವಾ ಆ ಸ್ಮಾರಕವನ್ನು ಪ್ರಚಾರಗೊಳಿಸುವ ಉದ್ದೇಶಕ್ಕಾಗಿ ಇದ್ದಾಗ ಹೊರತು, ಫಿಲ್ಮನ್ನು ತೆಗೆಯಲು ಯಾವುದೇ ಲೈಸೆನ್ಸನ್ನು ಮಂಜೂರುಮಾಡತಕ್ಕದಲ್ಲ. ;

(2) (1)ನೇ ಉಪನಿಯಮದ ಮೇರೆಗೆ ಮಂಜೂರು ಮಾಡಿದ ಪ್ರತಿಯೊಂದು ಲೈಸೆನ್ಸು ನಮೂನೆ Vರಲ್ಲಿ ಇರತಕ್ಕದು ಮತ್ತು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದು, ಎಂದರೆ :—

(ಕ) ಆ ಲೈಸೆನ್ಸು ವರ್ಗಾವಣೆಯಾಗತಕ್ಕದಲ್ಲ ಮತ್ತು ಅದು ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಗಾಗಿ ಸಿಂಧುವಾಗಿರತಕ್ಕದು ;

(ಖ) ಲೈಸೆನ್ಸ್‌ದಾರನು ಅಥವಾ ಅತನ ಪಕ್ಷದ ಯಾವನೇ ಸದಸ್ಯನು ಆ ಸ್ಮಾರಕದ ಯಾವುದೇ ಭಾಗ ಅಥವಾ ಅದಕ್ಕೆ ಲಗತ್ತಾದ ಹುಲ್ಲಿನ ಜಾಗ ಅಥವಾ ತೋಟವನ್ನು, ಹಾನಿಯ ಅಪಾಯಕ್ಕೆ ಒಡ್ಡುವ ಪರಿಣಾಮವನ್ನು ಹೊಂದಿರುವಂಥ ಅಥವಾ ಹೊಂದಿರಬಹುದಾದಂಥ ಯಾವುದೇ ಕಾರ್ಯವನ್ನು ಮಾಡತಕ್ಕದಲ್ಲ;

(ಗ) ಆ ಫಿಲ್ಮು ತೆಗೆಯುವ ಕಾರ್ಯಾಚರಣೆಯು, ಯಾವುದಕ್ಕೆ ಸಂಬಂಧಿಸಿದಂತೆ ಲೈಸೆನ್ಸನ್ನು ಮಂಜೂರು ಮಾಡಲಾಗಿದೆಯೋ ಆ ಸ್ಮಾರಕದ ಭಾಗಕ್ಕೆ ಸೀಮಿತವಾಗಿರತಕ್ಕದು;

(ಘ) ಆ ಸ್ಮಾರಕದ ಯಾವುದೇ ಭಾಗದ ಮೇಲೆ ನೀರು, ಎಣ್ಣೆ, ಗ್ರೀಸ್ ಅಥವಾ ಅಂಥಹ ಯಾವುದೇ ಸಂಬಂಧಪಡದ ವಸ್ತುವನ್ನು ಲೇಪಿಸತಕ್ಕದಲ್ಲ;

(ಙ) ಅಗತ್ಯವಿರುವ ಕಡೆಗಳಲ್ಲಿ ವಿದ್ಯುಚ್ಛಕ್ತಿ ಉತ್ಪಾದನಾ ಸ್ಥಾವರವನ್ನು ಆ ಸ್ಮಾರಕದಿಂದ ಅಥವಾ ಅದಕ್ಕೆ ಲಗತ್ತಾದ ಹುಲ್ಲಿನ ಜಾಗಗಳು ಅಥವಾ ತೋಟದಿಂದ ಆಚೆ ಇಡತಕ್ಕದು;

(ಚ) ಫಿಲ್ಮು ತೆಗೆಯುವ ಕಾರ್ಯಾಚರಣೆಯು ಸ್ಮಾರಕದ ಆವರಣದೊಳಗೆ ಕಾನೂನುಬದ್ಧವಾಗಿ ಇರಬಹುದಾದ ವ್ಯಕ್ತಿಗಳ ಓಡಾಟವನ್ನು ಅಡ್ಡಿಪಡಿಸತಕ್ಕದಲ್ಲ ಅಥವಾ ಅದಕ್ಕೆ ತಡೆಒಡ್ಡತಕ್ಕದಲ್ಲ ; ಮತ್ತು

(ಛ) ನಿರ್ದೇಶಕನು ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಷರತ್ತು.

25 **ಲೈಸೆನ್ಸ್ ರದ್ದಿಯಾತಿ.—** ನಿರ್ದೇಶಕನು, ಲೈಸೆನ್ಸುದಾರನಿಗೆ ನೋಟೀಸನ್ನು ಕೊಟ್ಟ ತರುವಾಯ ಅದರ ಯಾವುದೇ ಷರತ್ತನ್ನು ಉಲ್ಲಂಘಿಸಲಾಗಿದೆ ಎಂದು ಅವನಿಗೆ ಮನದಟ್ಟಾದರೆ, 24ನೇ ನಿಯಮದ ಮೇರೆಗೆ ಮಂಜೂರಾದ ಲೈಸೆನ್ಸನ್ನು, ರದ್ದುಗೊಳಿಸಬಹುದು.

26 **ಅಪೀಲು.—** 24ನೇ ನಿಯಮದ ಅಥವಾ 25ನೇ ನಿಯಮದ ಮೇರೆಗೆ ಮಾಡಿದ ನಿರ್ದೇಶಕನ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು ಮತ್ತು ಅಂಥ ಅಪೀಲಿನ ಬಗ್ಗೆ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದು.

27. **ಕೆಲವು ನಿಯಮಗಳಿಗೆ ಬಾಧಕವಾಗತಕ್ಕದಲ್ಲ.—** 21ನೇ ನಿಯಮದಲ್ಲಿ ಇರುವುದು ಯಾವುದೂ, ಮತ್ತು 20ನೇ ನಿಯಮದ ಮೇರೆಗೆ ಮಂಜೂರುಮಾಡಿದ ಅನುಮತಿಯ ಅಥವಾ 24ನೇ ನಿಯಮದ ಮೇರೆಗೆ ಮಂಜೂರುಮಾಡಿದ ಲೈಸೆನ್ಸಿನ ಯಾವುದೇ ಉಪಬಂಧವು, 3, 4, 5 ಮತ್ತು 6ನೇ ನಿಯಮಗಳ ಪ್ರವರ್ತನೆಗೆ ಬಾಧಕವನ್ನುಂಟುಮಾಡತಕ್ಕದಲ್ಲ.

28. ದಂಡನೆ.—ಈ ಅಧ್ಯಾಯದ ಅಥವಾ ಅದರ ಮೇರೆಗೆ ಮಂಜೂರು ಮಾಡಿದ ಯಾವುದೇ ಅನುಮತಿಯ ಅಥವಾ ಲೈಸೆನ್ಸಿನ ಯಾವುದೇ ಉಪಬಂಧವನ್ನು ಉಲ್ಲಂಘಿಸಿ ಯಾವುದೇ ಸಂರಕ್ಷಿತ ಸ್ಮಾರಕದ ಪ್ರತಿಯನ್ನು ಮಾಡುವ ಅಥವಾ ಫಿಲ್ಮನ್ನು ತೆಗೆಯುವ ಅಥವಾ ಯಾವುದೇ ಇತರ ಕಾರ್ಯವನ್ನು ಮಾಡುವ ಯಾರೇ ಆಗಲಿ, ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

## ಅಧ್ಯಾಯ—VI

### ಸಂಕೀರ್ಣ

29. ಅಪೀಲು ಸಲ್ಲಿಸುವ ರೀತಿ.— (1) ಅಧಿನಿಯಮದ ಮೇರೆಗೆ ಅಥವಾ ಈ ನಿಯಮಗಳ ಮೇರೆಗೆ ಸರ್ಕಾರಕ್ಕೆ ಸಲ್ಲಿಸಲಾಗುವ ಪ್ರತಿಯೊಂದು ಅಪೀಲು ಬರಹದಲ್ಲಿರತಕ್ಕುದು ಮತ್ತು ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಸಲ್ಲಿಸತಕ್ಕುದು.

(2) ಅಂಥ ಪ್ರತಿಯೊಂದು ಅಪೀಲಿನ ಜೊತೆಗೆ, ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶದ ಪ್ರತಿಯು ಇರತಕ್ಕುದು.

30. ಆದೇಶಗಳ ಮತ್ತು ನೋಟೀಸುಗಳ ಜಾರಿ.— ಅಧಿನಿಯಮದ ಮೇರೆಗೆ ಅಥವಾ ಈ ನಿಯಮಗಳ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಪ್ರತಿಯೊಂದು ಆದೇಶ ಅಥವಾ ನೋಟೀಸನ್ನು—

(ಕ) ಸಾಮಾನ್ಯ ಸ್ವರೂಪದ ಅಥವಾ ಒಂದು ವರ್ಗದ ವ್ಯಕ್ತಿಗಳಿಗೆ ಬಾಧಕವನ್ನುಂಟು ಮಾಡುವ ಯಾವುದೇ ಆದೇಶ ಅಥವಾ ನೋಟೀಸಿನ ಸಂದರ್ಭದಲ್ಲಿ, ಅದನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕುದು ; ಮತ್ತು

(ಖ) ನಿಗಮ ಅಥವಾ ಫರ್ಮಿಗೆ ಬಾಧಕವನ್ನುಂಟುಮಾಡುವ ಯಾವುದೇ ಆದೇಶ ಅಥವಾ ನೋಟೀಸಿನ ಸಂದರ್ಭದಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 1908ರ ಒಂದನೇ ಅನುಸೂಚಿಯಲ್ಲಿನ ಸಂದರ್ಭಾನುಸಾರ ಕ್ರಮಾದೇಶ XXIXರ 2ನೇ ನಿಯಮದಲ್ಲಿ ಅಥವಾ ಕ್ರಮಾದೇಶ XXXರ 3ನೇ ನಿಯಮದಲ್ಲಿ ಸಮನ್‌ಗಳ ಜಾರಿಗಾಗಿ ಉಪಬಂಧಿಸಿದ ರೀತಿಯಲ್ಲಿ ಜಾರಿ ಮಾಡತಕ್ಕುದು : ಮತ್ತು

(ಗ) ಒಬ್ಬ ವ್ಯಕ್ತಿಗೆ ಬಾಧಕವನ್ನುಂಟುಮಾಡುವ ಯಾವುದೇ ಆದೇಶ ಅಥವಾ ನೋಟೀಸಿನ ಸಂದರ್ಭದಲ್ಲಿ, ಅಂಥ ವ್ಯಕ್ತಿಗೆ—

(i) ಅದನ್ನು ಸಂಬಂಧಪಟ್ಟ ವ್ಯಕ್ತಿಗೆ ವಶಾವಣೆ ಮಾಡುವ ಅಥವಾ ಕೊಡಮಾಡುವ ಮೂಲಕ, ಅಥವಾ

(ii) ಅದನ್ನು ಹಾಗೆ ವಶಾವಣೆ ಮಾಡಲು ಅಥವಾ ಕೊಡ ಮಾಡಲು ಆಗದಿದ್ದರೆ, ಅದನ್ನು ಅಂಥ ವ್ಯಕ್ತಿಯ ಕುಟುಂಬದ ಯಾವನೇ ವಯಸ್ಕ ಸದಸ್ಯನಿಗೆ ವಶಾವಣೆ ಅಥವಾ ಕೊಡ ಮಾಡುವ ಮೂಲಕ ಅಥವಾ, ಆ ವ್ಯಕ್ತಿಯು ಕೊನೆಯದಾಗಿ ವಾಸಿಸುತ್ತಿದ್ದನೆಂದು ಅಥವಾ ವ್ಯವಹಾರವನ್ನು ನಡೆಸುತ್ತಿದ್ದನೆಂದು ಅಥವಾ ಲಾಭಕ್ಕಾಗಿ ವೈಯಕ್ತಿಕವಾಗಿ ಕೆಲಸ ಮಾಡುತ್ತಿದ್ದನೆಂದು ತಿಳಿದಿರುವಂಥ ಆವರಣದ ಹೊರಬಾಗಿಲಿನ ಮೇಲೆ ಅಥವಾ ಯಾವುದೇ ಎದ್ದು ಕಾಣುವ ಭಾಗದ ಮೇಲೆ ಅದರ ಪ್ರತಿಯನ್ನು ಅಂಟಿಸುವ ಮೂಲಕ, ಅಥವಾ

(iii) ತಲುಪೊಪ್ಪಿಗೆ ಕಳುಹಿಸಬೇಕಾದ ನೋಂದಣಿ ಅಂಚೆಯ ಮೂಲಕ ಅದನ್ನು ಕಳುಹಿಸುವ ಮೂಲಕ

—ಜಾರಿ ಮಾಡತಕ್ಕದ್ದು.

31. ನಿರಸನ ಮತ್ತು ಉಳಿಸುವಿಕೆಗಳು:— (i) ಮೈಸೂರು ರಾಜ್ಯದಲ್ಲಿ ಜಾರಿಯಲ್ಲಿರುವಂತೆ ಪ್ರಾಚೀನ ಸ್ಮಾರಕಗಳ ಪರಿರಕ್ಷಣೆ ಅಧಿನಿಯಮ, 1904 (ಕೇಂದ್ರ ಅಧಿನಿಯಮ 1904ರ VII);

(ii) ಹೈದರಾಬಾದ್ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಪ್ರಾಚೀನ ಸ್ಮಾರಕಗಳ ಪರಿರಕ್ಷಣೆ ಅಧಿನಿಯಮ, 1337 ಫಸಲಿ (ಹೈದರಾಬಾದ್ 1337 ಫಸಲಿಯ VIII); ಮತ್ತು

(iii) ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಮೈಸೂರು ಪ್ರಾಚೀನ ಸ್ಮಾರಕಗಳ ಪರಿರಕ್ಷಣೆ ಅಧಿನಿಯಮ, 1925 (ಮೈಸೂರು ಅಧಿನಿಯಮ 1925ರ 9); ಇವುಗಳ ಮೇರೆಗೆ ರಚಿಸಿದ ನಿಯಮಗಳು ಮತ್ತು ಈ ನಿಯಮಗಳಲ್ಲಿ ಒಳಗೊಂಡ ವಿಷಯಗಳಿಗೆ ಅಂಥ ನಿಯಮಗಳು ಸಂಬಂಧಪಡುವಷ್ಟರ ಮಟ್ಟಿಗೆ ರಾಜ್ಯದ ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ನಿಯಮಗಳನ್ನು, ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಅಂಥ ನಿರಸನವು—

(ಕ) ಹಾಗೆ ನಿರಸನಗೊಳಿಸಲಾದ ನಿಯಮಗಳ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮ; ಅಥವಾ

(ಖ) ಆ ನಿರಸನಗೊಳಿಸಲಾದ ನಿಯಮಗಳ ಮೇರೆಗೆ ಆರ್ಜಿಸಲಾದ, ಒದಗಿಬಂದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷ ಅಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆ, ಅಥವಾ

(ಗ) ಆ ನಿರಸನಗೊಳಿಸಲಾದ ಯಾವುದೇ ನಿಯಮದ ವಿರುದ್ಧವಾಗಿ ಮಾಡಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಅನುಭವಿಸಿದ ಯಾವುದೇ ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆ; ಅಥವಾ

(ಘ) ಹಿಂದೆ ಹೇಳಿದಂಥ ಯಾವುದೇ ಅಂಥ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆಗೆ ಸಂಬಂಧಿಸಿದಂತೆ ಯಾವುದೇ ತನಿಖೆ ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯ

—ಇವುಗಳಿಗೆ ಬಾಧಕವನ್ನುಂಟು ಮಾಡತಕ್ಕದಲ್ಲ ಮತ್ತು ಸದರಿ ನಿಯಮಗಳನ್ನು ನಿರಸನಗೊಳಿಸಲಾಗಿದ್ದಿದ್ದರೆ ಹೇಗೋ ಹಾಗೆ ಅಂಥ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಅಂಥ ಯಾವುದೇ ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು ವಿಧಿಸಬಹುದು.

ಅನುಸೂಚಿ

ನಮೂನೆ – I

## ಪುರಾತನ ವಸ್ತುಗಳ ಸ್ಥಳ ಬದಲಾವಣೆಗಾಗಿನ ಅರ್ಜಿ
(8ನೇ ನಿಯಮವನ್ನು ನೋಡಿ)

1. ಅರ್ಜಿದಾರನ ಹೆಸರು ಮತ್ತು ವಿಳಾಸ.
(ಅರ್ಜಿಯು ಒಂದು ಸಂಸ್ಥೆಯ ಪರವಾಗಿ ಆಗಿದ್ದರೆ, ಅದರ ಹೆಸರನ್ನು ಕೊಡತಕ್ಕದು).

2. ಪುರಾತನ ವಸ್ತುಗಳನ್ನು ಸ್ಥಳ ಬದಲಾವಣೆ ಮಾಡಬೇಕಾದಂಥ ಸ್ಥಳದ ಹೆಸರು.

ಸ್ಥಳ ತಾಲ್ಲೂಕು ಜಿಲ್ಲೆ

3. ಸ್ಥಳ ಬದಲಾಯಿಸಲು ಉದ್ದೇಶಿಸಲಾದ ಪುರಾತನ ವಸ್ತುಗಳ ವಿವರಣೆ
(ಪುರಾತನ ವಸ್ತುಗಳ ವಿವರಗಳನ್ನು ತೋರಿಸುವ ಛಾಯಾ ಚಿತ್ರಗಳನ್ನು ಲಗತ್ತಿಸತಕ್ಕದು).

4. ಸ್ಥಳ ಬದಲಾಯಿಸುವ ಸರಿ ಸುಮಾರು ದಿನಾಂಕ.

5. ಸ್ಥಳ ಬದಲಾಯಿಸುವ ಉದ್ದೇಶ.

6. ಆ ಪುರಾತನ ವಸ್ತುಗಳು ಅಥವಾ ಅವುಗಳ ಪೈಕಿ ಯಾವುದೇ ಆದರೂ ಪೂಜಾ ವಸ್ತುಗಳಾಗಿವೆಯೋ ಹೇಗೆ ?

ಮೇಲ್ಕಂಡ ಮಾಹಿತಿಯು ಸರಿಯಾಗಿದೆಯೆಂದು ನಾನು ಘೋಷಿಸುತ್ತೇನೆ.

ಸಂಸ್ಥೆಯ ಮೊಹರು : (ಅರ್ಜಿದಾರನ ರುಜು)
(ಅರ್ಜಿಯು ಒಂದು ಸಂಸ್ಥೆಯ ಪರವಾಗಿ ಆಗಿದ್ದರೆ, ರುಜುವು ಆ ಸಂಸ್ಥೆಯ ಮುಖ್ಯಸ್ಥನದಾಗಿರತಕ್ಕದು).

ಸ್ಥಳ. ..................

ದಿನಾಂಕ. .....................

## ನಮೂನೆ-II

### (14ನೇ ನಿಯಮವನ್ನು ನೋಡಿ)

ಒಂದು ನಿಯಂತ್ರಿತ ಪ್ರದೇಶದೊಳಗೆ ಗಣಿ ಕಾರ್ಯಾಚರಣೆಗಾಗಿ/ನಿರ್ಮಾಣಕ್ಕಾಗಿ ಲೈಸೆನ್ಸಿಗಾಗಿನ ಅರ್ಜಿ.

1. ಅರ್ಜಿದಾರನ ಹೆಸರು ಮತ್ತು ವಿಳಾಸ
   (ಅರ್ಜಿಯು ಒಂದು ಸಂಸ್ಥೆಯ ಪರವಾಗಿ ಆಗಿದ್ದರೆ, ಅದರ ಹೆಸರನ್ನು ಕೊಡತಕ್ಕದು)

2. ನಿಯಂತ್ರಿತ ಪ್ರದೇಶದ ಹತ್ತಿರ ಇರುವಂಥ ಅಥವಾ ಅದಕ್ಕೆ ಲಗತ್ತಾಗಿರುವ ಸ್ಮಾರಕದ ಹೆಸರು.

   ಸ್ಥಳ ತಾಲ್ಲೂಕು ಜಿಲ್ಲೆ

3. ಅನುಮತಿಯನ್ನು ಕೋರಲಾಗಿರುವಂಥ ಉದ್ದೇಶಿತ ಗಣಿ ಕಾರ್ಯಾಚರಣೆ/ನಿರ್ಮಾಣದ ಸ್ವರೂಪ ಮತ್ತು ವಿವರಗಳು

(ಗಣಿ ಕಾರ್ಯಾಚರಣೆ ಸಂದರ್ಭದಲ್ಲಿ, ಆ ಸ್ಮಾರಕ ಮತ್ತು ನಿಯಂತ್ರಿತ ಪ್ರದೇಶಕೆ ಸಂಬಂಧಪಟ್ಟಂತೆ ಕಾರ್ಯಾಚರಣೆಯ ವಿಸ್ತರಣೆಯನ್ನು ಕೆಂಪು ಆಕಾರ ರೇಖೆಯಲ್ಲಿ ತೋರಿಸಿ ಒಂದು ನಿವೇಶನ ನಕ್ಷೆಯನ್ನು ತ್ರಿಪ್ರತಿಗಳಲ್ಲಿ ಲಗತ್ತಿಸತಕ್ಕದು ; ಮತ್ತು ನಡೆಸಬೇಕಾದ ಕಾರ್ಯಾಚರಣೆಗಳನ್ನು ಯಾವ ಆಳಕ್ಕೆ ನಡೆಸಬೇಕೋ ಅದರ ಕಾರ್ಯಾಚರಣೆಯ ವಿಧಾನ, ಶಬ್ದವನ್ನು ಮುಂದಗೊಳಿಸುವ ಪದ್ಧತಿ, ಸ್ಫೋಟಕ ಸಾಮಗ್ರಿಯ ಬಗ್ಗೆ ಮತ್ತು ತುಂಬುವ, ಮತ್ತು ಒಂದು ಬಾರಿಗೆ ಸ್ಫೋಟಿಸಬೇಕಾದ ಸ್ಫೋಟಕ ಕಿಂಡಿಗಳ ಆಳ ಮತ್ತು ಸಂಖ್ಯೆ—ಇವುಗಳ ಬಗ್ಗೆ ವಿವರಗಳನ್ನು ನಿರ್ದಿಷ್ಟಪಡಿಸತಕ್ಕದು.)

(ನಿರ್ಮಾಣದ ಸಂದರ್ಭದಲ್ಲಿ, ಆ ಸ್ಮಾರಕ ಮತ್ತು ನಿಯಂತ್ರಿಕ ಪ್ರದೇಶಕ್ಕೆ ಸಂಬಂಧಪಟ್ಟಂತೆ ಕಟ್ಟಡ ಇರುವ ಸ್ಥಳವನ್ನು ಕೆಂಪು ಆಕಾರ ರೇಖೆಯಲ್ಲಿ ತೋರಿಸುವ ಒಂದು ನಿವೇಶನ ನಕ್ಷೆಯನ್ನು ತ್ರಿಪ್ರತಿಯಲ್ಲಿ ಮತ್ತು ಆ ಕಟ್ಟಡದ ನಕ್ಷೆ ಮತ್ತು ಉನ್ನತಿ ನಕ್ಷೆಯನ್ನು ಲಗತ್ತಿಸತಕ್ಕದು ; ಮತ್ತು ಆ ಕಟ್ಟಡದ ಬಣ್ಣ, ಬಾಹ್ಯ ನೋಟ ಮತ್ತು ರಕ್ಷಣಾ ವಿಧಾನ ಮತ್ತು ಆ ಕಟ್ಟಡದ ಲಗತ್ತುಗಳಿಗಾಗಿ ಮಣ್ಣನ್ನು ಯಾವ ಆಳಕ್ಕೆ ಅಗಿಯಬೇಕೋ ಆ ಆಳ—ಇವುಗಳನ್ನು ನಿರ್ದಿಷ್ಟಪಡಿಸತಕ್ಕದು.)

4. ಉದ್ದೇಶಿಸಿದ ಗಣಿ ಕಾರ್ಯಾಚರಣೆ/ನಿರ್ಮಾಣದ ಉದ್ದೇಶ.

5. ಉದ್ದೇಶಿತ ಗಣಿ ಕಾರ್ಯಾಚರಣೆ/ನಿರ್ಮಾಣದ ಸರಿಸುಮಾರು ಅವಧಿ ಮತ್ತು ಪ್ರಾರಂಭದ ದಿನಾಂಕ.

ಮೇಲ್ಕಂಡ ಮಾಹಿತಿಯು ಸರಿಯಾಗಿದೆಯೆಂದು ನಾನು ಘೋಷಿಸುತ್ತೇನೆ. ನಾನು, ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1961 ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಪಾಲಿಸಲು ಸಹ ಮಾತುಕೊಡುತ್ತೇನೆ.

ಸ್ಥಳ. ______________

ಸಂಸ್ಥೆಯ ಮೊಹರು. ______________

ದಿನಾಂಕ ______________

ಅರ್ಜಿದಾರನ ರುಜು.

(ಅರ್ಜಿಯು, ಒಂದು ಸಂಸ್ಥೆಯ ಪರವಾಗಿ ಆಗಿದ್ದರೆ, ರುಜುವು ಆ ಸಂಸ್ಥೆಯ ಮುಖ್ಯಸ್ಥನದಾಗಿರತಕ್ಕದ್ದು)

## ನಮೂನೆ — III

(15(2)ನೇ ನಿಯಮವನ್ನು ನೋಡಿ)

ಒಂದು ನಿಯಂತ್ರಿತ ಪ್ರದೇಶದೊಳಗೆ ಗಣಿ ಕಾರ್ಯಾಚರಣೆ/ನಿರ್ಮಾಣಕ್ಕಾಗಿ ಲೈಸೆನ್ಸ್

———————— ನ ————— ನು ———— ಜಿಲ್ಲೆಯ ————— ತಾಲ್ಲೂಕಿನ ———— ಗ್ರಾಮದ ಹತ್ತಿರ ಇರುವ ಅಥವಾ ಅದಕ್ಕೆ ಲಗತ್ತಾಗಿರುವ ನಿಯಂತ್ರಿತ ಪ್ರದೇಶದಲ್ಲಿ ———— ಗಾಗಿ ———— ಲೈಸೆನ್ಸಿಗಾಗಿ ಅರ್ಜಿಯನ್ನು ಸಲ್ಲಿಸಿರುವುದರಿಂದ ಮತ್ತು ಅವನು, ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1961 ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಪಾಲಿಸಲು ಮಾತುಕೊಟ್ಟಿರುವುದರಿಂದ,

ಕರ್ನಾಟಕದಲ್ಲಿ ಪುರಾತತ್ವ ನಿರ್ದೇಶಕನಾದ, ———— ನಾನು, ಇದಕ್ಕೆ ಲಗತ್ತಿಸಿದ ನಕ್ಷೆಯ ಮೇಲೆ ಕೆಂಪು ಆಕಾರ ರೇಖೆಯಲ್ಲಿ ಸೂಚಿಸಲಾದ ಪ್ರದೇಶದಲ್ಲಿ ———— ಗಾಗಿ ಸದರಿ ———— ಇವರಿಗೆ ಸದರಿ ನಿಯಮಗಳ 15ನೇ ನಿಯಮದ (2)ನೇ ಉಪನಿಯಮದ ಮೇರೆಗೆ ಈ ಲೈಸೆನ್ಸನ್ನು ಈ ಮೂಲಕ ಮಂಜೂರು ಮಾಡುತ್ತೇನೆ.

ಈ ಲೈಸೆನ್ಸನ್ನು ಸದರಿ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳಿಗೆ ಒಳಪಟ್ಟು ಮತ್ತು ಈ ಕೆಳಕಂಡ ಇನ್ನೂ ಹೆಚ್ಚಿನ ಷರತ್ತುಗಳಿಗೆ ಒಳಪಟ್ಟು ಮಂಜೂರು ಮಾಡಲಾಗಿದೆ, ಎಂದರೆ:—

ಲೈಸೆನ್ಸು ವರ್ಗಾವಣೆಯಾಗತಕ್ಕದಲ್ಲ. ಅದು 19 ......... ರ ........... ತಿಂಗಳ .................... ದಿನಾಂಕದಿಂದ ಪ್ರಾರಂಭವಾಗಿ ...............ಅವಧಿಗಾಗಿ ಸಿಂಧುವಾಗಿರತಕ್ಕದ್ದು.

ಸ್ಥಳ ..................

ದಿನಾಂಕ................

ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆಯ
ಮೊಹರು.

ಕರ್ನಾಟಕ ಪುರಾತತ್ವ ನಿರ್ದೇಶಕನ ರುಜು.

## ನಮೂನೆ—IV

(28ನೇ ನಿಯಮವನ್ನು ನೋಡಿ)

ಒಂದು ಸಂರಕ್ಷಿತ ಸ್ಮಾರಕದಲ್ಲಿ ಫಿಲ್ಮು ತೆಗೆಯುವ ಕಾರ್ಯಾಚರಣೆಗಾಗಿ ಲೈಸೆನ್ಸ್‌ಗಾಗಿನ ಅರ್ಜಿ

1 ಅರ್ಜಿದಾರನ ಹೆಸರು ಮತ್ತು ವಿಳಾಸ.

(ಅರ್ಜಿಯು, ಒಂದು ಸಂಸ್ಥೆಯ ಪರವಾಗಿ ಆಗಿದ್ದರೆ, ಅದರ ಹೆಸರನ್ನು ಕೊಡತಕ್ಕದು)

2 ಉದ್ದೇಶಿತ ಫಿಲ್ಮು ತೆಗೆಯುವ ಕಾರ್ಯಾಚರಣೆಯನ್ನು ನಡೆಸಬೇಕಾಗಿರುವಂಥ ಸ್ಮಾರಕದ ಹೆಸರು.

ಸ್ಥಳ ತಾಲ್ಲೂಕು ಜಿಲ್ಲೆ

3 ಫಿಲ್ಮು ತೆಗೆಯಲು ಉದ್ದೇಶಿಸಿದ ಸ್ಮಾರಕದ ಭಾಗ.

4 ಉದ್ದೇಶಿತ ಫಿಲ್ಮು ತೆಗೆಯುವ ಕಾರ್ಯಾಚರಣೆಯ ಸ್ವರೂಪ ಮತ್ತು ಉದ್ದೇಶ ಮತ್ತು ಆ ಸ್ಮಾರಕದ ಫಿಲ್ಮನ್ನು ತೆಗೆಯಲು ಉದ್ದೇಶಿಸಲಾದಂಥ ಸಂದರ್ಭ. (ಹಸ್ತ ಪ್ರತಿಯ ಸಂಬಂಧಪಟ್ಟ ಉದ್ಧೃತವನ್ನು ತ್ರಿಪ್ರತಿಗಳಲ್ಲಿ ಲಗತ್ತಿಸತಕ್ಕದು ಮತ್ತು ಫಿಲ್ಮನ್ನು ತೆಗೆಯಬೇಕಾದ ದೃಶ್ಯಗಳ ವಿವರಗಳನ್ನು ತ್ರಿಪ್ರತಿಗಳಲ್ಲಿ ಒದಗಿಸತಕ್ಕದು)

5 ಪಾತ್ರ ವರ್ಗದಲ್ಲಿನ ವ್ಯಕ್ತಿಗಳ ಸಂಖ್ಯೆ.

6 ಉದ್ದೇಶಿತ ಫಿಲ್ಮು ತೆಗೆಯುವ ಕಾರ್ಯಾಚರಣೆಯ ಸರಿಸುಮಾರು ಅವಧಿ ಮತ್ತು ಪ್ರಾರಂಭದ ದಿನಾಂಕ.

ಮೇಲ್ಕಂಡ ಮಾಹಿತಿಯು ಸರಿಯಾಗಿದೆಯೆಂದು ನಾನು ಘೋಷಿಸುತ್ತೇನೆ. ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1961 ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಪಾಲಿಸಲು ಸಹ ನಾನು ಮಾತು ಕೊಡುತ್ತೇನೆ.

ಸ್ಥಳ...............

ದಿನಾಂಕ............... ಸಂಸ್ಥೆಯ ಮೊಹರು

ಅರ್ಜಿದಾರನ ರುಜು

(ಅರ್ಜಿಯು, ಒಂದು ಸಂಸ್ಥೆಯ ಪರವಾಗಿ ಆಗಿದ್ದರೆ, ರುಜುವು ಆ ಸಂಸ್ಥೆಯ ಮುಖ್ಯಸ್ಥನದಾಗಿರತಕ್ಕದು)

ನಮೂನೆ—V

(24ನೇ ನಿಯಮವನ್ನು ನೋಡಿ)

ಒಂದು ಸಂರಕ್ಷಿತ ಸ್ಮಾರಕದಲ್ಲಿ ಫಿಲ್ಮು ತೆಗೆಯುವ ಕಾರ್ಯಾಚರಣೆಗಾಗಿ ಲೈಸೆನ್ಸ್.

......ನ........... ..................................ನು.......... ಜಿಲ್ಲೆಯ..............
ಇರುವ,....................ಎಂದು ಪ್ರಸಿದ್ಧವಾಗಿರುವ ಸಂರಕ್ಷಿತ ಸ್ಮಾರಕದಲ್ಲಿ ಫಿಲ್ಮನ್ನು ತೆಗಿಯುವ ಕಾರ್ಯಾಚರಣೆಗಾಗಿ ಲೈಸೆನ್ಸ್‌ಗಾಗಿನ ಅರ್ಜಿಯನ್ನು ಸಲ್ಲಿಸಿರುವುದರಿಂದ ಮತ್ತು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1961 ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಪಾಲಿಸಲು ಅವನು ಮಾತುಕೊಟ್ಟಿರುವುದರಿಂದ;

ಕರ್ನಾಟಕದಲ್ಲಿ ಪುರಾತತ್ವ ನಿರ್ದೇಶಕನಾದ ನಾನು, ..............................
ಆ ಸ್ಮಾರಕಗಳ ಈ ಕೆಳಕಂಡ ಭಾಗಕ್ಕೆ ಇಲ್ಲಿ ಲಗತ್ತಿಸಿದ ಹಸ್ತಪ್ರತಿಯ ಮತ್ತು ದೃಶ್ಯಗಳ ವಿವರಗಳ ಪ್ರಕಾರ ಫಿಲ್ಮು ತೆಗೆಯುವ ಕಾರ್ಯಾಚರಣೆಯನ್ನು ನಡೆಸುವುದಕ್ಕಾಗಿ......... ಸದರಿ ನಿಯಮಗಳ 26ನೇ ನಿಯಮದ ಮೇರೆಗೆ ಈ ಲೈಸೆನ್ಸನ್ನು ಈ ಮೂಲಕ ಮಂಜೂರ ಮಾಡುತ್ತೇನೆ, ಎಂದರೆ :—

ಈ ಲೈಸೆನ್ಸು ಸದರಿ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳಿಗೆ ಒಳಪಟ್ಟು ಮಂಜೂರು ಮಾಡಲಾಗಿದೆ, ಮತ್ತು ಅದು ಈ ಕೆಳಕಂಡ ಷರತ್ತುಗಳಿಗೂ ಸಹ ಒಳಪಟ್ಟಿರುತ್ತದೆ, ಎಂದರೆ :—

ಇದು 19..........ರ................ತಿಂಗಳ..............ದಿವಸದಿಂದ ಪ್ರಾರಂಭವಾಗಿ.................ಅವಧಿಗಾಗಿ ಸಿಂಧುವಾಗಿರುತ್ತದೆ:

ಸ್ಥಳ.....................

ದಿನಾಂಕ...................

ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆಯ
ಮೊಹರು

ಕರ್ನಾಟಕ ಪುರಾತತ್ವ ನಿರ್ದೇಶಕರ ರುಜು.

(ಸಂಖ್ಯೆ ಇಡಿ 16 ಎಸ್‌ಎಲ್‌ಆರ್ 64)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಆರ್. ವರ್ಮ,
ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಇಲಾಖೆ.